OS No. 92/2017 PW-4

ದಿನಾಂಕ 10.06.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಹೆಚ್ ಕೆ ವಕೀಲರಿಂದಃ

ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ ಅದನ್ನು ನನ್ನ ಸಾಕ್ಷ್ಯಾವೆಂದು ಪರಿಗಣಿಸಲು ಕೋರಿಕೊಳ್ಳುತ್ತೇನೆ. ದಾವಾಗೆ ಸಂಬಂದಪಟ್ಟಂತೆ ಕ್ರಯದ ಕರಾರು ಪತ್ರವನ್ನು ನಿಪಿ1 ರಲ್ಲಿ ನನ್ನ ಸಹಿ ಇದ್ದು ಅದನ್ನು ನಿಪಿ-1(ಜಿ) ಎಂದು, ವಾದಿ ಮತ್ತು ಪ್ರತಿವಾದಿಯವರ ಸಹಿಗಳನ್ನು ಈಗಾಗಲೇ ನಿಪಿ-1(ಎ) ಯಿಂದ ನಿಪಿ-1(ಡಿ) ಎಂದು, ಸಾಕ್ಷಿದಾರರ ಸಹಿಗಳನ್ನು ನಿಪಿ-1(ಇ) ಮತ್ತು ನಿಪಿ-1(ಎಫ್) ಎಂದು ಈಗಾಗಲೇ ಗುರುತಿಸಲಾಗಿದೆ.

ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಡಿ ಜಿ ವಕೀಲರಿಂದಃ

ನಿಪಿ-1 ಕರಾರು ಪತ್ರವನ್ನು ಮಾಡಲು ಪಹಣಿ ವಿಭಾಗ ಪತ್ರವನ್ನು ನೀಡಿದ್ದರು. ಬೇರೆ ದಾಖಲೆಯನ್ನು ನೀಡಿರಲಿಲ್ಲ. ಪ್ರತಿವಾದಿ 1 ರವರು ಸ್ವತಃ ಈ ಮೇಲಿನ ದಾಖಲೆಯನ್ನು ನೀಡಿರುತ್ತಾರೆ. ನೊಂದಣಿ ಕ್ರಯ ಮಾಡಿಸಲು ಕೆಲವೊಂದು ದಾಖಲೆಗಳನ್ನು ಕೊಡಬೇಕೆಂದು ಮಿತಿ ಬರೆದಿರುತ್ತೇವೆ. ಸರ್ವೆ ನಕ್ಷೆ, ಇಸಿ, ವಂಶವೃಕ್ಷ ಕೊಡಬೇಕೆಂದು ಬರೆದಿರುತ್ತೇವೆ. ನಿಪಿ-1 ಕ್ಕೆ ಪ್ರತಿವಾದಿಯವರ ಸಹಿಗಳನ್ನು ಹಾಕಿರುತ್ತಾರೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ಅಪ್ರಾಪ್ತರ ಸಹಿಯನ್ನು ಪಡೆದಿರುವುದಿಲ್ಲ. ಪ್ರತಿವಾದಿಯವರು ಕುಟುಂಬ ಸಮೇತ ಬಂದಿರಲಿಲ್ಲ ಎಂದರೆ ಸುಳ್ಳು. ದಿಃ27.10.2016 ರಲ್ಲಿ ನನ್ನ ಬಳಿ ಯಾರೂ ಬಂದಿರಲಿಲ್ಲ. ಪ್ರತಿವಾದಿ ಸಾಲದ ಭದ್ರತೆಗಾಗಿ ಪತ್ರ ಬರೆದುಕೊಡಲು ನನಗೆ ತಿಳಿಸಿದ್ದರು ಎಂದರೆ ಸುಳ್ಳು. ವಾದಿ ಮತ್ತು ಪ್ರತಿವಾದಿಯವರ ನಡುವೆ ಆದ ಹೊರಗಡೆ ವಿಷಯ ನನಗೆ ಗೊತ್ತಿಲ್ಲ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.